ಎಲ್.ಎ.ಸಿ.ನಂಃ**121/2020**
ಪ್ರಾಸಾ**: 01**

ಇಂದು ದಿನಾಂಕ 31.08.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ವಿಶೇಷ ಸರಕಾರಿ ವಕೀಲರಾದ ಶ್ರೀ ಎಸ್.ಎಸ್.ಜಿ.ಇವರಿಂದ.

1) ನನ್ನ ಜಮೀನನ್ನು ಸ್ವಾಧೀನ ಪಡಿಸುವ ಪೂರ್ವದಲ್ಲಿ ನನಗೆ ನೋಟೀಸ ಕೊಟ್ಟಿದ್ದರು. ನಂತರ ಅಧಿಕಾರಿಗಳು ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಗ್ರಾಮಕ್ಕೆ ನಿಗದಿ ಮಾಡಿದ ಯೋಗ್ಯ ಬೆಲೆಯನ್ನು ನನ್ನ ಜಮೀನಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

2) ಹೆಚ್ಚಿನ ಪರಿಹಾರಕ್ಕೆ ಕೋರಿ ಸಲ್ಲಿಸಿದ ದಿನಾಂಕ ನನಗೆ ನೆನಪಿಲ್ಲ. ಹೆಚ್ಚಿನ ಪರಿಹಾರ ಕೋರಿ ಅರ್ಜಿಯನ್ನು ಸರಿಯಾದ ಸಮಯದಲ್ಲಿ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಒಣಬೇಸಾಯದ ಜಮೀನು ಎಂದರೆ ಸರಿ.

3) ನನ್ನ ಜಮೀನಿನಲ್ಲಿ ಬೆಳೆದ ಬೆಳೆ ಹಾಗೂ ಉತ್ಪನ್ನದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ಮರಡಿ ಜಮೀನು ಹಾಗೂ ಎರಿ ಜಮೀನಿನ ಬೆಲೆಗಳು ಬೇರೆ ಬೇರೆ ಇರುತ್ತವೆ ಎಂದರೆ ಸರಿ. ಎರಡೂ ಜಮೀನುಗಳ ಫಲವತ್ತತೆ ಬೇರೆ ಬೇರೆ ಇರುತ್ತವೆ ಎಂದರೆ ಸರಿ.

4) ನಿಪಿ-2 ರಿಂದ 7, ರೂಗಿ ಗ್ರಾಮ ಖರೀದಿ ಪತ್ರ ಮತ್ತು ಖರೀದಿ ಕರಾರು ಪತ್ರಗಳಿದ್ದು, ಸದರಿ ಜಮೀನುಗಳ ಸರ್ವೆ ನಂಬರ್ ಮತ್ತು ಸದರಿ ಜಮೀನುಗಳನ್ನು ಯಾವ ಉದ್ದೇಶಕ್ಕಾಗಿ ಖರೀದಿಸಿರುತ್ತಾರೆ ಎನ್ನುವ ಬಗ್ಗೆ ಮಾಹಿತಿ ಇರುವುದಿಲ್ಲ.

5) ರೂಗಿ ಗ್ರಾಮದ ಖರೀದಿ ಪತ್ರದ ಜಮೀನಿಗೂ ನನ್ನ ಜಮೀನಿಗು ಕನಿಷ್ಟ 10 ಕಿಮಿ ದೂರವಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ೨ ಕಿ.ಮಿ. ದೂರವಿರುತ್ತದೆ ಎಂದು ಹೇಳುತ್ತಾರೆ.

ಖರೀದಿ ಪತ್ರದ ಜಮೀನಿಗೂ ಹಾಗೂ ನನ್ನ ಜಮೀನಿಗು ಇರುವ ಅಂತರ ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ.

6) ಸರಕಾರ ನನಗೆ ಸೂಕ್ತ ಪರಿಹಾರ ಕೊಟ್ಟರೂ ಯಾವುದೇ ಸೂಕ್ತ ದಾಖಲೆಗಳು ಇರದೇ ಇದ್ದರೂ ಒಂದು ಎಕರೆಗೆ ರೂ.60 ಲಕ್ಷ ಹೆಚ್ಚಿನ ಪರಿಹಾರ ಕೋರಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ

ಒಂದನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.